ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 97-100
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಧುನಿಕ ಕನ್ನಡ ದಲಿತ ಕಾದಂಬರಿಗಳಲ್ಲಿ ನೋವಿನ ನೆಲೆಗಳು

**ಡಾ. ಜಗನ್ನಾಥ ಸಾಯಿಬಣ್ಣ**
ಕನ್ನಡ ಅತಿಥಿ ಉಪನ್ಯಾಸಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***
*ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯ ಘಟ್ಟ ಬಹಳ ಮುಖ್ಯವಾದಂತಹದ್ದು. ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡಂತಹ ದಲಿತ ಚಳುವಳಿಯೊಡನೆ ದಲಿತ ಸಾಹಿತ್ಯವು ಬೆಳೆಯ ತೊಡಗಿತು. ದಲಿತರ ಮೇಲಿನ ದಬ್ಬಾಳಿಕೆ ದೌರ್ಜನ್ಯಗಳ ಜೊತೆಗೆ 1972ರ ಬೂಸಾ ಪ್ರಕರಣ, ಮರಾಠ ದಲಿತ ಚಳುವಳಿ ಮುಂತಾದವು ಕನ್ನಡ ದಲಿತ ಸಾಹಿತ್ಯದ ಸೃಷ್ಠಿಗೆ ಪ್ರಬಲ ಪ್ರೇರಣೆ ನೀಡಿದವು. ಇವುಗಳಲ್ಲದೆ ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಕಾರ್ಲ್‌ಮಾರ್ಕ್ಸ್‌ರವರ ವಿಚಾರದಾರೆಗಳು ಕನ್ನಡ ದಲಿತ ಸಾಹಿತ್ಯವನ್ನು ಗಾಢವಾಗಿ ಪ್ರಭಾವಿಸಿವೆ. ಈ ದೇಶದ ಬಹುಸಂಖ್ಯಾತ ಜನರಾದ ಅಸ್ಪೃಶ್ಯರು ಕತ್ತಲೆಯ ಬದುಕನ್ನು ಅನಾವರಣಗೊಳಿಸಿದ ಕಾರಣಕ್ಕಾಗಿ ಕನ್ನಡ ದಲಿತ ಸಾಹಿತ್ಯಕ್ಕೆ ವಿಶೇಷ ಸ್ಥಾನ ಪಡೆದಿದೆ.*

***Keywords:*** *ದಲಿತರು, ದೌರ್ಜನ್ಯ, ಕನ್ನಡ ಸಾಹಿತ್ಯ, ಬಂಡಾಯ ಸಾಹಿತ್ಯ, ಕುಸುಮಬಾಲೆ, ಒಡಲಾಳ, ದೇವನೂರ ಮಹಾದೇವ.*

## ಪೀಠಿಕೆ

ಕಾದಂಬರಿಗಳ ದೃಷ್ಟಿಯನ್ನಿಟ್ಟುಕೊಂಡು ನೋಡಿದಾಗ ಕೇವಲ ಒಂದು ಕಾದಂಬರಿಯ ಮೂಲಕ ದಲಿತರ ಇಡೀ ಚಿತ್ರಣ ಕಟ್ಟಿಕೊಡಲು ಸಾಧ್ಯವಿಲ್ಲ. ಈವರೆಗೆ ಬಂದಿರುವ ಒಂದೊಂದು ದಲಿತ ಕಾದಂಬರಿಗಳು ದಲಿತರ ಬದುಕಿನ ಒಂದೊಂದು ಮುಖವನ್ನು ಪರಿಚಯಿಸುತ್ತದೆ. ಕನ್ನಡ ದಲಿತ ಕಾದಂಬರಿಗಳ ಒಟ್ಟು ಅಧ್ಯಯನದ ಮೂಲಕ ಕನ್ನಡ ದಲಿತರ ಬದುಕು ಮತ್ತು ಅಲ್ಲಿನ ಶೋಷಣೆಯ ನೆಲೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ ಆ ದೃಷ್ಟಿಕೋನದಿಂದ ಕನ್ನಡ ದಲಿತ ಕಾದಂಬರಿಗಳಲ್ಲಿ ಕಂಡುಬರುವ ದಲಿತ ಬದುಕಿನ ವಿವಿಧ ಆಯಾಮಗಳು ದಲಿತ ಕಾದಂಬರಿಗಳ ಮೂಲಕ ಕಟ್ಟಿಕೊಡಬೇಕಾಗಿದೆ.

### ದೇವನೂರ ಮಹಾದೇವರವರ ಒಡಲಾಳ ಮತ್ತು ಕುಸುಮಬಾಲೆ

ದಲಿತ ಸಾಹಿತ್ಯ ಸಂದರ್ಭದಲ್ಲಿ ಹುಟ್ಟಿಕೊಂಡಂತಹ ಬರಹಗಾರರಲ್ಲಿ ದೇವನೂರ ಅವರು ಪ್ರಮುಖರಾಗಿ ಕಂಡುಬರುತ್ತಾರೆ. ದೇವನೂರವರ ಒಟ್ಟು ಬರಹಗಳನ್ನು ಗುರುತಿಸಿದರೆ ಚಳುವಳಿ ಮತ್ತು ಸಾಹಿತ್ಯ ಎರಡು ಕೂಡ ಪರಸ್ಪರ ಪ್ರಭಾವಕ್ಕೆ ಒಳಗಾಗಿವೆ. ಇವರು ತಮ್ಮ ಕಥೆಗಳ ಮುಂದುವರಿಕೆಯ ರೂಪವಾಗಿ ನಮಗೆ ಒಡಲಾಳ ಅನಂತರ ಕುಸುಮಬಾಲೆ ಸಿಗುತ್ತ ಹೋಗುತ್ತವೆ.

### ಕುಸುಮಬಾಲೆ ಮತ್ತು ಒಡಲಾಳದಲ್ಲಿ ಶೋಷಿತ ಸಮುದಾಯದ ಅಸ್ತಿತ್ವದ ನೆಲೆ

ಭಾರತೀಯ ಶ್ರೇಣೀಕೃತ ವ್ಯವಸ್ಥೆಯ ಸಂದರ್ಭದಲ್ಲಿ ಶೋಷಿತ ಸಮುದಾಯದಿಂದ ಬಂದಂತಹ ಒಬ್ಬ

***Please cite this article as:*** ಜಗನ್ನಾಥ ಸಾಯಿಬಣ್ಣ. (2026). ಆಧುನಿಕ ಕನ್ನಡ ದಲಿತ ಕಾದಂಬರಿಗಳಲ್ಲಿ ನೋವಿನ ನೆಲೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 97–100

ಲೇಖಕ ಬರವಣಿಗೆಗೆ ತೊಡುಗುವ ಸಂಧರ್ಭದಲ್ಲಿ ಹೇಗಿರುತ್ತದೆ ಮತ್ತು ಬಡತನ ಹಸಿವು ಅವಮಾನಗಳನ್ನು ಅನುಭವಿಸಿ ಕೂಡ ಒಬ್ಬ ಶೋಷಿತ ಬರಹಗಾರ ಹೇಗೆ ತನ್ನೆಲ್ಲಾ ನೋವನ್ನು ಸಿಟ್ಟಿನ ಮೂಲಕ ಅಭಿವ್ಯಕ್ತಿಸುತ್ತಾ ಹೋಗುತ್ತಾನೆ ಎಂಬುದು ಬಹಳ ಸೂಕ್ಷ್ಮವಾಗಿ ಗಮನಿಸುವಂತಹದ್ದಾಗಿದೆ. ಯಾವ ಶೋಷಿತ ಸಮುದಾಯಗಳು ಅನ್ಯಾಯ ಅವಮಾನಗಳಿಗೆ ಒಳಗಾಗಿವೆ ಎಂಬುದು ಚರ್ಚೆ ಮಾಡುವ ಜೊತೆಜೊತೆಗೆ ದಲಿತ–ದಲಿತೇತರ ಸಮುದಾಯಗಳಲ್ಲಿ ಮಾನವೀಯತೆ ಬೆಸೆಯುವುದು ಹೇಗೆ ಎನ್ನುವಂತಹದ್ದನ್ನು ತೋರಿಸಿಕೊಡುತ್ತ ಹೋಗುತ್ತಾರೆ.

ಒಡಲಾಳದ ಸಾಕವ್ವನ ಕುಟಂಬ ಯಾಕೆ ಸಂಕಷ್ಟಕ್ಕೆ ಒಳಗಾಗುತ್ತದೆ ಕಳೆದುಹೋದ ಹುಂಜವನ್ನು ಹುಡುಕಿಕೊಳ್ಳುವ ಸಂದರ್ಭದಲ್ಲಿ ಇರುವ ಹುಂಜವನ್ನು ಕಳೆದುಕೊಳ್ಳಬೇಕಾದ ಸ್ಥಿತಿ ನೋಡಿದಾಗ ಶೋಷಿತ ಸಮುದಾಯ ಅಸ್ತಿತ್ವದ ನೆಲೆಗಳು ಎಷ್ಟು ತೀಕ್ಷ್ಣವಾಗಿ ಕಂಡು ಬರುತ್ತವೆ ಎಂಬುದನ್ನು ಗಮನಿಸುತ್ತಾ ಹೋಗುತ್ತಾರೆ.

ಇಡೀ ಕಾದಂಬರಿಯ ಕೊನೆಯ ಸಾಲು 'ಸಂಬಜ್ಜ ಅನ್ನೋದು ದೊಡ್ಡದು ಕಣಾ' ಎನ್ನುವ ಮಾತಿನಂತೆ ದೇವನೂರವರ ಆಲೋಚನಾ ನೆಲೆಗಳು ಕಾದಂಬರಿಯ ಆಚೆಗೆ ತಂದು ನಿಲ್ಲಿಸುತ್ತವೆ. 70ರ ದಶಕದ ಮೂಲ ಆಶಯವೇ ಮಾನವೀಯ ನೆಲೆಯಲ್ಲಿ ಬೆಳೆಯುವಂತೆ ಮಾಡುವುದಾಗಿದೆ ಶೇಷಗಿರಿಯಪ್ಪನ ಕೊಲೆಯಾದಗ ಆತ ದಲಿತನಲ್ಲದಿದ್ದರೂ ಸಹ ದಲಿತರು ಯಾಕೆ ಹೋರಾಟ ಮಾಡಿದರು? ಎಂಬುದು ಸೂಕ್ಷ್ಮವಾಗಿ ಗಮನಿಸುವಂತಹದ್ದು. ದಲಿತೇತರ ಮೇಲೆ ನಡೆದ ಹೋರಾಟವನ್ನು ಸಹ ಇಲ್ಲಿ ಮಹಾದೇವರವರು ತಿಳಿಸುತ್ತಾ ಹೋಗಿದ್ದಾರೆ.

**ಸ್ಪೃಶ್ಯ ಮತ್ತು ಅಸ್ಪೃಶ್ಯ ಸಂವೇದನೆಯ ನೆಲೆ**

ಆಧುನಿಕ ಕನ್ನಡ ದಲಿತ ಕಾದಂಬರಿಗಳು ದಲಿತರ ಬದುಕಿನ ವಿವಿಧ ಆಯಾಮಗಳನ್ನು ತೆರೆದು ತೋರಿಸಿವೆ. ದಲಿತರ ಸಮಸ್ಯೆಗಳನ್ನು ಸಹ ಚರ್ಚಿಸಿವೆ. ದೇವನೂರವರ ಕುಸುಮಬಾಲೆಯಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಅನೈತಿಕ ಸಂಬಂಧಗಳನ್ನು ಚಿತ್ರಿಸುತ್ತಲೇ ದಲಿತಕೇರಿಯ ವಸ್ತುಸ್ಥಿತಿಯನ್ನು ಬಿಂಬಿಸಿದೆ ಈ ಕಾದಂಬರಿಯಲ್ಲಿ ಗಂಡು ಹೆಣ್ಣಿನ ಸಂಬಂಧಗಳು ಜಾತಿಯ ಎಲ್ಲೆಯನ್ನು ಮೀರಿ ಸಹಜವಾಗಿ ನಡೆಯುವ ಕ್ರಿಯೆಗಳಂತೆ ಕಂಡು ಬರುತ್ತವೆ. ಹಿಂದಿನ ಕಾಲದಲ್ಲಿ ಗಂಡ ಸತ್ತರೆ ಮರುಮದುವೆಗೆ ಅವಕಾಶ ಮಾಡಿಕೊಡಲಾಗಿತ್ತು. ಅಕ್ಕಮಹಾದೇವಮ್ಮ ಮದುವೆಯಾಗಲು ನಿರಾಕರಿಸಿದಾಗ ಅವಳಿಗೆ ಜೀತಗಾರನೊಂದಿಗೆ ಸಂಬಂಧ ಹೊರಿಸಿ ಯಾಡನು ಜನಿಸಿದನೆಂದು ಆಕೆಯ ಭಾವ ಮೈದುನ ಅಪವಾದ ಹೊರಿಸುತ್ತಾರೆ. ಬೇರೆಯವರೊಂದಿಗೆ ಸಂಬಂಧ ಬೆಳೆಸಿ ಮಗುವನ್ನು ಪಡೆಯುವ ಕೆಂಪಿ ಯಾರಿಗೋ ಹುಟ್ಟಿ ಶ್ರೀಮಂತರ ಸಾಕು ಮಗಳಾಗಿ ಸೋಮೆಗೌಡರ ಹೆಂಡತಿಯಾಗುವ ಮಲ್ಲಾಜಮ್ಮ ಮತ್ತು ಚೆನ್ನ, ಕುಸುಮಬಾಲೆ ಸಂಬಂಧ ಅಮಾಸ ಮತ್ತು ಭಗವತಿಯರ ಸಂಬಂಧಗಳು ಬಡವರಿಗೆ ದಾನ–ಧರ್ಮ ಮಾಡುತ್ತಿದ್ದ ಸೋಮಪ್ಪಗೌಡ ತನ್ನ ಮಗಳ ಜೊತೆ ಅನೈತಿಕ ಸಂಬಂಧವಿದೆ ಎನ್ನುವ ಕಾರಣಕ್ಕೆ ಚೆನ್ನನ ಕೊಲೆ ಮಾಡಿಸುವಂತಹದ್ದು. ಈ ಎಲ್ಲವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕುಸುಮಬಾಲೆ ಕೇಂದ್ರಬಿಂದುವೇ ಅಂತರಜಾತಿ ಸಂಬಂಧ ಅಥವಾ ವಿವಾಹ ಎಂಬುದು ಕಂಡುಬರುತ್ತದೆ.

**ಹಸಿವಿನ ತೀವ್ರತೆ**

ಹಸಿದವನಿಗೆ ಮಾತ್ರ ಹಸಿವಿನ ಮೌಲ್ಯ ಗೊತ್ತಾಗುತ್ತದೆ. ಹಸಿವು ಮನುಷ್ಯನಿಗೆ ನಿದ್ದೆಯನ್ನೋಡಿಸುತ್ತದೆ. ಹಸಿವಾದಗ ಮನುಷ್ಯ ಯಾವುದಾದರೊಂದು ಉಪಾಯ ಹುಡುಕಿ ಹಸಿವನ್ನು ನೀಗಿಸಿಕೊಳ್ಳುತ್ತಾನೆ. ಕಿತ್ತು ತಿನ್ನುವ ಬಡತನದಲ್ಲಿ ಹಸಿವನ್ನು ನೀಗಿಸಲು ಕಳ್ಳತನದ ಮೊರೆ ಹೋಗುತ್ತಾರೆ ಕಳ್ಳತನ ಮಾಡಿಯಾದರೂ ತಿನ್ನವ ಕಾರ್ಯಕ್ಕೆ ಕೈ ಹಾಕುತ್ತಾರೆ ದೇವನೂರರವರು

ಒಡಲಾಳ ಮತ್ತು ಕುಸುಮಬಾಲೆಯಲ್ಲಿ ಕದಿಯುವುದನ್ನು ಅನುಮೋದಿಸುತ್ತದೆ. ಹಸಿವಿನಿಂದ ದಲಿತರೂ ಮೇಲ್ಜಾತಿಯವರ ವಸ್ತುಗಳನ್ನು ಕದ್ದಾದರೂ ತಿನ್ನಬೇಕೆನ್ನುವುದನ್ನು ಪ್ರತಿಪಾದಿಸುತ್ತವೆ. ಕಂಗೆಟ್ಟಂತಹ ಸಾಕವ್ವನ ಕುಟುಂಬಕ್ಕೆ ಕದಿಯುವುದು ಅನಿವಾರ್ಯ ಅದೇ ರೀತಿ ಕುಸುಮಬಾಲೆಯಲ್ಲಿಯೂ ಕೂಡ ಗಾರಸಿದ್ದಾವ ಮೇಲ್ಜಾತಿಯವರ ತೋಟದಲ್ಲಿ ತೆಂಗಿನಕಾಯಿ ಕದ್ದು ಸಿಕ್ಕಿ ಹಾಕಿಕೊಂಡು ಹೊಡೆತ ತಿಂದರೂ ಸಹ ಕಳವು ಮಾಡುವುದೇ ಸರಿ ಎಂದು ವಾದಿಸುತ್ತಾನೆ. ಗಾರಸಿದ್ದಾವನ ಮನಸ್ಥಿತಿಯು ಇಡೀ ತೋಟವನ್ನು ಬೆಳೆಸಿದವರು ನಾವು, ಗಿಡ ನೆಟ್ಟವರು ನಾವು, ಕಡಿಯುವುದಕ್ಕೂ ಹಕ್ಕಿಲ್ಲ ಎಂದು ಗೌಡನಿಗೆ ಪ್ರಶ್ನಿಸುತ್ತಾನೆ. ಗಾರಸಿದ್ದಾವನ ಸೂಕ್ಷ್ಮ ಮನಸ್ಥಿತಿ ಅರ್ಥಮಾಡಿಕೊಳ್ಳಬಹುದು. ಇದಕ್ಕನುಗುಣವಾಗಿ ಸಿದ್ಧಲಿಂಗಯ್ಯನವರ ಕವನ "ನಿಮ್ಮ ತೋಟದ ಎಳೆನೀರಲ್ಲಿ ನಮ್ಮ ರಕ್ತದ ನೀರಿದೆ" ಎಂಬ ಕವನ ಅವಲೋಕಿಸಬಹುದು. ಇದೇ ಕಾದಂಬರಿಯಲ್ಲಿ ಬರುವ ಅಮಾಸ ಕೂಡ ಮೇಲ್ಜಾತಿಯ ಹೆಂಗಸರು ಮುಟ್ಟಾದ ಸೀರೆಗಳನ್ನು ಕದ್ದು ತಂದು ಮಾರುವುದನ್ನೇ ತನ್ನ ವೃತ್ತಿಯನ್ನಾಗಿಸಿಕೊಂಡಿದ್ದು ದುಡಿದು ತಿನ್ನಲು ಕೂಲಿ ಸಿಗಲಾರದ ಸಂದರ್ಭದಲ್ಲಿ ಕಾಳಣ್ಣ ನೆಲಗಡಲೆ ಕದಿಯುವಂತಹದ್ದು, ಈ ಎಲ್ಲಾ ಅಂಶಗಳನ್ನು ನೋಡಿದಾಗ ಮೇಲ್ಜಾತಿಯ ಸಮುದಾಯವು ದಲಿತರಿಗೆ ಕಳವು ಮಾಡಿಸಲು ಕಾರಣವಾಗಿದೆ. ದುಡಿಯಲು ಮುಕ್ತ ಅವಕಾಶ ಸಿಗದ ಸಂದರ್ಭದಲ್ಲಿ ಆರ್ಥಿಕ ಅಸಮಾನತೆಗೆ ಕಾರಣವಾಗಿದೆ. ಕಳ್ಳತನ ಒಂದೆಡೆ ಬದುಕನ್ನು ನೀಡಿದರೆ ಮತ್ತೊಂದೆಡೆ ಬದುಕನ್ನು ಕಸಿದುಕೊಂಡಿದೆ. ದಲಿತರ ಬದುಕಿಗೆ ಕಳವು ಮುಳುವಾಗಿ ಪರಿಣಮಿಸಿದೆ.

**ಕಾದಂಬರಿಯ ವಸ್ತು ಮತ್ತು ಆಶಯ**

ದೇವನೂರರವರ ಕುಸುಮಬಾಲೆ ಕಾದಂಬರಿಯನ್ನು ಓದುತ್ತಾ ಹೋದ ಹಾಗೆ ಇಡೀ ಕಾದಂಬರಿಯ ಮೂಲವಸ್ತುವೇ ಗಂಡ ಸತ್ತ ಹನ್ನೆರಡು ತಿಂಗಳಿಗೆ ಯಾಡ ಹುಟ್ಟಿದನೆಂದರೆ ಈತ ಒಬ್ಬ ಜೀತಗಾರನಿಗೆ ಹುಟ್ಟಿದ್ದಾನೆ ಎಂಬ ಅಪವಾದವನ್ನು ಅಕ್ಕಮಹಾದೇವಮ್ಮನ ಭಾವ ಮೈದುನ ಅಪವಾದ ಹೊರೆಸುತ್ತಾರೆ. ಮುಂದೆ ಸಾಮಾಜಿಕ ಸಂದರ್ಭಗಳು ಹೇಗೆಲ್ಲಾ ಬದಲಾವಣೆಯಾಗುತ್ತವೆಂಬುದು ಕುಸುಮಬಾಲೆಯಲ್ಲಿ ದೇವನೂರುರವರ ಕಟ್ಟಿಕೊಡುತ್ತಾ ಹೋಗುತ್ತಾರೆ. ಇದು ಒಟ್ಟು ನಾಲ್ಕು ತಲೆಮಾರುಗಳುಳ್ಳ ಕಾದಂಬರಿಯಾಗಿದೆ.

ಅಕ್ಕಮಹಾದೇವಮ್ಮ

ಯಾಡ–ಯಾಡೇಗೌಡ

ಸೋಮಪ್ಪಗೌಡ

ಕುಸುಮಬಾಲೆ

ಇಡೀ ಚಿತ್ರಣವೇ ಕಾದಂಬರಿಯ ವಸ್ತುವಾಗಿ ಕಂಡುಬರುತ್ತದೆ. ಒಂದು ರೀತಿಯ ಪುರಾಣವನ್ನು ಕಟ್ಟಿಕೊಡುತ್ತಾ ಹೋಗುತ್ತದೆ. (ಮುಂದೆ ಯಾಡ ಹಟ್ಟಿಯಲ್ಲಿದ್ದಂತಹವನು ಯಾಡೇಗೌಡನಾಗಿ ಬದಲಾವಣೆ ಹೊಂದುತ್ತಾನೆ) ಚೆನ್ನನ ಕೊಲೆಯನ್ನು ಅರಿಯದ ಬಳಗವು ಚನ್ನನ ಬರುವಿಕೆಗಾಗಿ ಕಾಯುವುದಿದೆಯಲ್ಲಾ ಅದು ಬದುಕಿನ ವೈರುಧ್ಯಗಳನ್ನು ಹೇಳುತ್ತದೆ. ಯಾವ ರೀತಿ ಸಾಯುವ ಮಗುವನ್ನು ಉಳಿಸಿಕೊಳ್ಳಲು ತೂರಮ್ಮ ತವಕಪಡುವಂತಹದ್ದು ಎಷ್ಟು ಸತ್ಯವೋ ಕೊಲೆಯಾದ ಚೆನ್ನನು ಬರುವುದು ಸಾಧ್ಯವಿಲ್ಲ ಎಂಬುದು ಅಷ್ಟೇ ಸತ್ಯ. ಕುಸುಮಾಳ ಜೊತೆ ಚೆನ್ನನ ಸಂಬಂಧವಿರುವ ಕಾರಣಕ್ಕಾಗಿ ಚೆನ್ನನ ಕೊಲೆಯಾಗಿರುವಂತಹದ್ದು, ಚೆನ್ನನ ಸಂಬಂಧ ತಿಳಿದು ಕುಸುಮಾಳ ಗಂಡ ಬಿಟ್ಟು ಹೋಗಿರುವಂತಹದ್ದು ಅವಲೋಕಿಸಬಹುದಾಗಿದೆ. ಕೊಲೆಯಾದ ಚೆನ್ನ ಕಥೆಯಾಗುತ್ತಾನೆ. ವಾಸ್ತವದಲ್ಲಿ ಕೊಲೆಯಾದ ಚೆನ್ನನ ಬಗ್ಗೆ ಕೊಲೆಯನ್ನು ಅರಿಯದ ಬಳಗದ ಮುಂದೆ ಅವನು ಜೀವಂತ ಇದ್ದಾನೆ ಎನ್ನುವ ರೀತಿಯಲ್ಲಿ ಕಥೆ ಕಟ್ಟುತ್ತಾ ಹೋಗುತ್ತಾರೆ. ಶೋಷಿತ ಸಮುದಾಯಗಳಿಗೆ ಸ್ವಾಭಿಮಾನದ

ಸಂಕೇತವಾಗಿ ಚೆನ್ನ ಕಂಡುಬರುತ್ತಾನೆ. ಅದಕ್ಕಾಗಿಯೇ ಕಾದಂಬರಿಯ ಕೊನೆಯಲ್ಲಿ 'ಸಂಬಂಜ್ಜ ಎಂಬುದು ದೊಡ್ಡದು ಕಣಾ' ಎನ್ನುವ ಇಡೀ ಕಾದಂಬರಿಯ ಶೋಷಿತ ಸಮುದಾಯಗಳ ವ್ಯವಸ್ಥೆಯನ್ನು ಕುರಿತು ತಿಳಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. *ಕಾರ್ಯ*. ನವಕರ್ನಾಟಕ ಪ್ರಕಾಶನ.
- ದೇವನೂರು ಮಹಾದೇವ. (1988). *ಕುಸುಮಬಾಲೆ*. ಪುಸ್ತಕ ಪ್ರಕಾಶನ.
- ಗೀತಾ ನಾಗಭೂಷಣ. (2021). ಬದುಕು. ಸಪ್ನ ಬುಕ್ ಹೌಸ್.